**Code No. 16 Y**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಶೀಘ್ರಲಿಪಿ — ಪ್ರವೀಣ ದರ್ಜೆ — ದ್ವಿತೀಯ ಪತ್ರಿಕೆ
# (ವಿಸ್ತರಿಸುವಿಕೆ)

ಜನವರಿ / ಫೆಬ್ರವರಿ, 2020

ವೇಳೆ { ಉಕ್ತಲೇಖನ : 5 ನಿಮಿಷಗಳು
ವಿಸ್ತರಣೆ : 3 ಗಂಟೆಗಳು }

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಅವರ ಶೀಘ್ರಲಿಪಿಯ ಟಿಪ್ಪಣಿಗಳನ್ನು ಅವಶ್ಯವಾಗಿರುವಂತೆ ಸರಿಯಾದ ನಮೂನೆಯಲ್ಲಿ ಸೂಕ್ತವಾಗಿ ವಿಸ್ತರಿಸಬೇಕೆಂದು ಸೂಚಿಸತಕ್ಕದ್ದು.
3) ಪ್ರಶ್ನಾಂಕಗಳು ವೇಗ ವಿಷಯದ ಭಾಗವಾಗಿರುವುದರಿಂದ ಅವುಗಳನ್ನು ಸ್ವಲ್ಪ **ಎತ್ತರಿಸಿದ ಧ್ವನಿಯಲ್ಲಿ** ಓದತಕ್ಕದ್ದು.
4) ಪ್ರತಿಯೊಂದು ಪ್ರಶ್ನೆಗೂ ನಿಗದಿಯಾಗಿರತಕ್ಕ ಅಂಕಗಳನ್ನು ಪ್ರಶ್ನೆಗಳ ಉಕ್ತಲೇಖನ ಕೊಡುವಾಗ ಓದಕೂಡದು. ಉಕ್ತಲೇಖನ ಮುಗಿದ ನಂತರ ಈ ಅಂಶಗಳನ್ನು ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು.

---

***ಪ್ರಶ್ನೆ ಒಂದು :*** ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ನೂರೈವತ್ತು ನೌಕರರ ನೇಮಕ ಕಾನೂನುಬಾಹಿರ ಎಂದು ಗುಲ್ಬರ್ಗ ಉಚ್ಚ ನ್ಯಾಯಾಲಯದ ತೀರ್ಪು ನೀಡಿದ್ದು ನೇಮಕ ರದ್ದುಪಡಿಸಲು ಆದೇಶಿಸಿದೆ. $\frac{1}{4}$ ಈ ನೌಕರರ/ ನೇಮಕವನ್ನು ಬಲವಾಗಿ ಸಮರ್ಥಿಸಿಕೊಂಡಿದ್ದ ಕಂಪನಿ ಆಡಳಿತ ಮಂಡಳಿಗೆ ಹಿನ್ನೆಡೆಯಾಗಿದ್ದು, ಕಾನೂನು ಹೋರಾಟದಲ್ಲಿ ಹಂಗಾಮಿ ನೌಕರರ ಸಂಘ ವಿಜಯ ಸಾಧಿಸಿದೆ. ವಾದ ಪ್ರತಿವಾದ ಆಲಿಸಿದ ಹಾಗೂ ದಾಖಲೆ, ಪುರಾವೆ/ $\frac{1}{2}$ ಪರಿಶೀಲಿಸಿದ ನ್ಯಾಯಮೂರ್ತಿಗಳು ನೇಮಕ ರದ್ದುಪಡಿಸುವಂತೆ ಆಡಳಿತ ಮಂಡಳಿಗೆ ಆದೇಶಿಸಿದೆ. ಸರ್ಕಾರ ಹೊರಡಿಸಿದ ಆದೇಶ, ನೇಮಕಕ್ಕೆ ವಿಧಿಸಿದ್ದ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿ ನೌಕರರ

3/4 ನೇ/ಮಕಾತಿ ಮಾಡಿರುವುದು ಸ್ಪಷ್ಟವಾಗಿದೆ. ಹಂಗಾಮಿ ನೌಕರರ ಹನ್ನೊಂದು ವರ್ಷಗಳ ಸೇವೆ ಪರಿಗಣಿಸದಿರುವುದು ಗಂಭೀರ ಲೋಪ ಎಂದು ನ್ಯಾಯಾಧೀಶರು ತೀರ್ಪು ನೀಡಿದ್ದಾರೆ. **ಪ್ರಜಾವಾಣಿ ದಿನಪತ್ರಿಕೆಯ ವಿಶೇಷ**
1 **ವರದಿಗಾರರಾXಗಿ ಪತ್ರಿಕಾ ವರದಿಯನ್ನು ತಯಾರಿಸಿ.** (ಅಂಕಗಳು : 20)

**ಪ್ರಶ್ನೆ ಎರಡು :** ಅನೇಕ ಇಲಾಖೆಗಳವರು ರಾಜ್ಯ ಪತ್ರದಲ್ಲಿ ಪ್ರಕಟಿಸುವ ಸಲುವಾಗಿ ಅಧಿಸೂಚನೆಗಳ ಛಾಯ ಪ್ರತಿಯನ್ನು ಮಾತ್ರ ಕಳುಹಿಸುತ್ತಿರುವುದನ್ನು ಸರ್ಕಾರವು
1/4 ಗಮನಿಸಿ/ ದೆ. ಇನ್ನೂ ಕೆಲವು ಇಲಾಖೆಗಳವರು ಭೂ ಹಂಚಿಕೆಗೆ ಸಂಬಂಧಿಸಿದಂತೆ ಆರ್ಥಿಕವಾಗಿ ಪ್ರಾಮುಖ್ಯತೆ ಪಡೆದಿರುವ ಅಧಿಸೂಚನೆಗಳ ಪ್ರಕಟಣೆಗೂ ಸಹ ಸ್ಟೆನ್ಸಿಲ್ ಆಗಿರುವ ಪ್ರತಿಗಳನ್ನು
1/2 ಕಳುಹಿಸುತ್ತಿರುವುದರಿಂದ ಫೋ/ರ್ಜರಿ ಮಾಡಿರುವಂತ ದಾಖಲೆಗಳು ಪ್ರಕಟಗೊಳ್ಳುವ ಸಾಧ್ಯತೆ ಸಹ ಇರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚನೆಗಳನ್ನು ಪ್ರಕಟಿಸಲು ಮಾರ್ಗಸೂಚಿಗಳು ಏನೆಂದರೆ,
3/4 ಅಧಿಸೂಚನೆಗಳು ದ್ವಿ/ಪ್ರತಿಯಲ್ಲಿರಬೇಕು, ಸ್ಪಷ್ಟವಾಗಿ ಲೇಸರ್ ಪ್ರಿಂಟ್ ಮುಖಪತ್ರದೊಂದಿಗೆ ಕಛೇರಿ ವಿಳಾಸ, ದೂರವಾಣಿ ಸಂಖ್ಯೆಯೊಂದಿಗೆ ಸಾಫ್ಟ್ ಪ್ರತಿ ಇ–ಮೇಲ್ ಮೂಲಕ ರವಾನಿಸುವುದು, ಕಛೇರಿ ವಿಳಾಸ ಹಾಗೂ ದೂರವಾಣಿ ಸಂಖ್ಯೆ
ಸ್ಪಷ್ಟವಾಗಿರಬೇಕುX **ನಿರ್ದೇಶಕರ ಸುತ್ತೋಲೆ** 2
**ಸಿದ್ಧಪಡಿಸಿ.** (ಅಂಕಗಳು : 25)

**ಪ್ರಶ್ನೆ ಮೂರು :** ಕರ್ನಾಟಕ ಸರ್ಕಾರ ಸಚಿವಾಲಯದ ಕ್ಲಬ್, ಕಬ್ಬನ್ ಉದ್ಯಾನವನ, ಬೆಂಗಳೂರು ಇವರು ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕ್ಲಬ್ ಕಲಾವಿದರು
ಹಾಗೂ ನಾಡಿನ ಜ/ನಪ್ರಿಯ ಕಲಾವಿದರಿಂದ 1/4
ಕಲಾ ವೈವಿಧ್ಯ ಕಾರ್ಯಕ್ರಮಗಳನ್ನು ದಿನಾಂಕ ಹದಿನೆಂಟರಿಂದ ಇಪ್ಪತ್ತನೇ ನವೆಂಬರ್ ಎರಡು ಸಾವಿರದ ಹತ್ತೊಂಭತ್ತರಂದು ಪ್ರತಿದಿನ ಮಧ್ಯಾಹ್ನ ಒಂದು ಗಂಟೆಗೆ ಚನ್ನಬಸಪ್ಪ
ರಂಗಮಂದಿರ, ಕೆ.ಜಿ./ಎಸ್. ಕ್ಲಬ್‌ನಲ್ಲಿ 1/2
ಆಯೋಜಿಸಿರುತ್ತಾರೆ. ಕಾರ್ಯಕ್ರಮದ ಉದ್ಘಾಟಕರು ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಸಚಿವರು, ವಿಶೇಷ ಆಹ್ವಾನಿತರಾಗಿ ಜಂಟಿ ನಿರ್ದೇಶಕರು, ವಾರ್ತಾ ಮತ್ತು ಸಂಪರ್ಕ ಇಲಾಖೆ, ರಿಜಿಸ್ಟ್ರಾರ್,
ಕರ್ನಾಟಕ/ ಚಲನಚಿತ್ರ ಅಕಾಡೆಮಿ, ಗೌರವ 3/4
ಉಪಸ್ಥಿತಿ, ಮುಖ್ಯ ಇಂಜಿನಿಯರ್,

ಸಂಪರ್ಕ ಮತ್ತು ಕಟ್ಟಡ, ಲೋಕೋಪಯೋಗಿ
ಇಲಾಖೆ ಹಾಗೂ ಅಧ್ಯಕ್ಷರು, ಕರ್ನಾಟಕ
ಸರ್ಕಾರ ಸಚಿವಾಲಯದ ಕ್ಲಬ್. **ಗೌರವ**
3 **ಕಾರ್ಯದರ್ಶಿಯವರ ಸಹಿಗೆ ಆಹ್ವಾನX ಪತ್ರಿಕೆ**
**ತಯಾರಿಸಿ.** (ಅಂಕಗಳು : 25)

**ಪ್ರಶ್ನೆ ನಾಲ್ಕು :** ಪುತ್ತೂರಿನ ಉಮಾಮಹೇಶ್ವರ್
ರವರು ಜೂನ್ ಎರಡು ಸಾವಿರದ ಹತ್ತರಲ್ಲಿ
ಗೃಹ ನಿರ್ಮಾಣದ ಸಾಲವಾಗಿ ಹತ್ತು ಲಕ್ಷ
ರೂಪಾಯಿಗಳನ್ನು ಪಡೆದಿದ್ದು, ಸಾಲ ಪಡೆದ
1/4 ನಂತರ ಸಂಸ್ಥೆಯ ನಿಯಮಾ/ನುಸಾರ ಮಾಸಿಕ
ಸಾಲದ ಕಂತುಗಳನ್ನು ಮರು ಪಾವತಿ
ಮಾಡಿರುವುದಿಲ್ಲ. ಕಳೆದ ಎಂಟು ತಿಂಗಳಿನಿಂದ
ತಾವು ಮೂರು ಲಕ್ಷ ರೂಪಾಯಿಗಳನ್ನು ಮರು
ಪಾವತಿ ಮಾಡದೆ ಬಾಕಿ ಉಳಿಸಿಕೊಂಡಿರುವುದು
1/2 ವಿಷಾದಕರವಾದ ಸಂಗತಿ/ಯಾಗಿದೆ. ಈ ಪತ್ರ
ತಲುಪಿದ ಹದಿನೈದು ದಿನಗಳೊಳಗೆ ತಾವು
ಪಡೆದಿರುವ ಸಾಲದ ಬಾಕಿ ಹಣವನ್ನು ಕೂಡಲೇ
ಮರುಪಾವತಿ ಮಾಡಬೇಕೆಂದು ಕೋರುತ್ತೇನೆ.
ಒಂದು ವೇಳೆ ಮರು ಪಾವತಿ ಮಾಡದಿದ್ದರೆ ತಮ್ಮ
3/4 ಅಡಮಾನದ ಆ/ಸ್ತಿಯನ್ನು ನಿಯಮಾನುಸಾರ
ಬಹಿರಂಗ ಹರಾಜು ಮಾಡಿ ಬಂದ ಹಣವನ್ನು
ಸಂಸ್ಥೆಗೆ ಜಮಾ ಮಾಡಿಕೊಳ್ಳಲಾಗುವುದು.
ಇಂತಹ ಕ್ರಮಕ್ಕೆ ಅವಕಾಶ ನೀಡದಿರುವಂತೆ
ವಿನಂತಿಸುವ **ವ್ಯವಹಾರ ಪತ್ರವನ್ನು ವ್ಯವಸ್ಥಾಪಕ**
**ನಿರ್ದೇಶಕXರು, ಕರ್ನಾಟಕ ಗೃಹ ನಿರ್ಮಾಣ** 4
**ಹಣಕಾಸು ಸಂಸ್ಥೆ, ಇವರು ಬರೆದಂತೆ ತಯಾರಿಸಿ.**

(ಅಂಕಗಳು : 15)

**ಪ್ರಶ್ನೆ ಐದು :** ಬೀದರ ಜಿಲ್ಲೆಯ ಬೀದರ
ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರ
ಹುದ್ದೆಯ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ
ಅರ್ಜಿಯ/ನ್ನು ಆಹ್ವಾನಿಸಲಾಗಿದೆ. ಮುಖ್ಯ 1/4
ಆಡಳಿತಾಧಿಕಾರಿಗಳು ಮತ್ತು ಸದಸ್ಯ
ಕಾರ್ಯದರ್ಶಿಗಳು, ಆಯ್ಕೆ ಸಮಿತಿ, ಬೀದರ್
ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ ಇವರ
ಹೆಸರಿನಲ್ಲಿ ಐದು ಸಾವಿರ ರೂಪಾಯಿಯ
ಡಿಡಿ(ಹಿಂದಿ/ರುಗಿಸಲಾಗದಿರುವ) ಮತ್ತು 1/2
ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು
ಮುಖ್ಯ ಆಡಳಿತಾಧಿಕಾರಿಗಳ ವಿಳಾಸಕ್ಕೆ
ಎಂಟನೇ ನವೆಂಬರ್ ಎರಡು ಸಾವಿರದ
ಹತ್ತೊಂಭತ್ತರ ಸಂಜೆ ಐದು ಗಂಟೆಯೊಳಗೆ
ಸಲ್ಲಿಸತಕ್ಕದ್ದು. ನಂತ/ರ ಬಂದ ಅರ್ಜಿಗಳನ್ನು 3/4
ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ.
ಸಂದರ್ಶನದ ದಿನಾಂಕವನ್ನು ನಂತರ
ತಿಳಿಸಲಾಗುವುದು. ಹೆಚ್ಚಿನ ಮಾಹಿತಿಯನ್ನು
ಸಂಸ್ಥೆಯ ವೆಬ್‌ಸೈಟ್‌ನಿಂದ ಪಡೆಯಿರಿ.
**ಪ್ರಕಟಣೆಯನ್ನು ತಯಾರಿಸಿರಿ.X** 5

(ಅಂಕಗಳು : 15)